ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 09/07/2019

## ಸದ್ಯದ ರಾಜಕೀಯ ಬಿಕ್ಕಟ್ಟು ಕುರಿತು ಮಾಜಿ ಸ್ಪೀಕರ್‌ಗಳ ಅಭಿಮತ

# ಶಾಸಕರ ರಾಜೀನಾಮೆ ಸ್ವೀಕರಿಸದೆ ಗತ್ಯಂತರವಿಲ್ಲ

**ಕೆ.ಆರ್.ಪೇಟೆ ಕೃಷ್ಣ** ಲಾರ್ 9/7/19

ರಾಜೀನಾಮೆ ನೀಡಿರುವ ಎಲ್ಲ ಶಾಸಕರನ್ನು ಸ್ಪೀಕರ್ ಆಹ್ವಾನಿಸಿ ಅವರೊಂದಿಗೆ ಮಾತಾಡಬೇಕು. ಯಾವುದಾದರೂ ಒತ್ತಡಕ್ಕೆ ಮಣಿದು ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವರೇ ಎಂಬುದನ್ನು ಪರಿಶೀಲಿಸಬೇಕು.



ಶಾಸಕರು ಯಾವುದೇ ಒತ್ತಡಕ್ಕೆ ಮಣಿದು ರಾಜೀನಾಮೆ ನೀಡಿಲ್ಲ ಎಂಬುದು ಮನವರಿಕೆಯಾದರೆ ಅವರ ರಾಜೀನಾಮೆ ಅಂಗೀಕರಿಸದೇ ಬೇರೆ ದಾರಿಯೇ ಸ್ಪೀಕರ್‌ಗೆ ಇಲ್ಲ. ಶಾಸಕರಿಗೆ ರಾಜೀನಾಮೆ ನೀಡುವ ಹಕ್ಕು ಇದೆ. ಅದು ಸರಿಯೇ, ತಪ್ಪೇ ಎಂಬುದು ರಾಜಕೀಯ ಚರ್ಚೆ. ಯಾವುದೇ ಒತ್ತಡಕ್ಕೆ ಒಳಗಾಗದೇ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರೆ, ಅದನ್ನು ತಾಂತ್ರಿಕವಾಗಿ ಪ್ರಶ್ನಿಸುವಂತಿಲ್ಲ.

**ಕಾಗೋಡು ತಿಮ್ಮಪ್ಪ**



ಶಾಸಕರು ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ಸ್ಪೀಕರ್ ಆ ರಾಜೀನಾಮೆಗಳನ್ನು ಸ್ವೀಕರಿಸಿ, ಒಪ್ಪಿಕೊಳ್ಳುವ ಮಾರ್ಗ ಮಾತ್ರ ಇದೆ. ಬೇರ ಯಾವ ದಾರಿಯೂ ಇಲ್ಲ. ಶಾಸಕಾಂಗ ಪಕ್ಷದ ಸಭೆಗೆ ಗೈರಾಗುವುದು ಪಕ್ಷಾಂತರ ನಿಷೇಧ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ.

**ಕೆ.ಬಿ.ಕೋಳಿವಾಡ**

ಸದ್ಯದ ಪರಿಸ್ಥಿತಿಯಲ್ಲಿ ಸ್ಪೀಕರ್ ಅವರಿಗೆ ಶಾಸಕರು ನೀಡಿರುವ ರಾಜೀನಾಮೆ ಸ್ವೀಕರಿಸುವುದನ್ನು ಬಿಟ್ಟರೆ ಬೇರೆ ಮಾರ್ಗ ಇಲ್ಲ. ಶಾಸಕರು ಸ್ವಯಂ ಪ್ರೇರಿತರಾಗಿ ರಾಜೀನಾಮೆ ಸಲ್ಲಿಸಿದ್ದಾರೆಯೇ ಅಥವಾ ಒತ್ತಡಕ್ಕೆ ಒಳಗಾಗಿ



ರಾಜೀನಾಮೆ ನೀಡಿದ್ದಾರೆಯೇ ಎನ್ನುವುದನ್ನೇ ಪರಿಶೀಲಿಸಬಹುದು. ಶಾಸಕರೇ ಖುದ್ದು ಸ್ಪೀಕರ್ ಕಚೇರಿಗೆ ಹಾಜರಾಗಿ ರಾಜೀನಾಮೆ ಸಲ್ಲಿಸಬೇಕು ಎನ್ನುವ ಷರತ್ತು ಕಾನೂನಿನಲ್ಲಿ ಇಲ್ಲ. ಶಾಸಕಾಂಗ ಪಕ್ಷಕ್ಕೆ ಗೈರು ಹಾಜರಾದಲ್ಲಿ ಪಕ್ಷಾಂತರ ನಿಷೇಧ ಕಾಯಿದೆ ವ್ಯಾಪ್ತಿ ಅನ್ವಯಿಸುವುದಿಲ್ಲ. ವಿಪ್ ನೀಡುವ ಮುನ್ನವೇ ರಾಜೀನಾಮೆ ಸಲ್ಲಿಸಿದರೆ, ಅವರನ್ನು ಶಾಸಕಾಂಗ ಪಕ್ಷದಿಂದ ಅನರ್ಹಗೊಳಿಸಬಹುದೆ ವಿನಃ ಪಕ್ಷಾಂತರ ಕಾಯಿದೆ ಅನ್ವಯ ಕ್ರಮ ಕೈಗೊಳ್ಳಲು ಅವಕಾಶ ಇಲ್ಲ.

**ಸಮಯದ ಪ್ರಕ್ರಿಯೂ ಇದೆ**

ರಾಜೀನಾಮೆ ಸಲ್ಲಿಸಿರುವ ಶಾಸಕರಿಗೆ ಖುದ್ದಾಗಿ ಹಾಜರಾಗುವಂತೆ ಸ್ಪೀಕರ್ ನೋಟಿಸ್ ಜಾರಿಗೊಳಿಸಿ ಸ್ಪಷ್ಟನೆ ಪಡೆಯಬೇಕಾಗುತ್ತದೆ. ಈ ಪ್ರಕ್ರಿಯೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ಈ ಪ್ರಕರಣ ಒಂದೆರಡು ದಿನಗಳಲ್ಲಿ ಬಗೆಹರಿಯುವುದಿಲ್ಲ. ಅಂತಿಮವಾಗಿ ಶಾಸಕರಿಂದ ಹೇಳಿಕೆ ಪಡೆದ ಬಳಿಕ ಸ್ಪೀಕರ್ ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

-ಡಾ.ಬಿ.ಎಲ್.ಶಂಕರ್ ವಿಧಾನ ಪರಿಷತ್ತಿನ ಮಾಜಿ ಸಭಾಪತಿ